ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕೃಷಿ ಮಹಾವಿದ್ಯಾಲಯ ಹನುಮನಮಟ್ಟಿ

ಸಂ.ಡೀನ್(ಕೃಷಿ)/ಕೃಮಹ/ 597-B / 2026-27

ಡೀನ್ (ಕೃಷಿ) ರವರ ಕಚೇರಿ
ಕೃಷಿ ಮಹಾವಿದ್ಯಾಲಯ
ಹನುಮನಮಟ್ಟಿ-581 115.
ದಿನಾಂಕ: 09.11.2026

ಅಧಿಸೂಚನೆ

ವಿಷಯ: ಪ್ರೊಜೆಕ್ಟ್ ಅಸಿಸ್ಟಂಟ್ ಹುದ್ದೆಗೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳುವ ಕುರಿತು...
ಉಲ್ಲೇಖ: ಸಂ. ಸಂನಿ/ಸಿಶಾ-1/ತಾ.ನೇ/724/2026-27. ದಿನಾಂಕ: 06.11.2026

*****

ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿ ಆವರಣದಲ್ಲಿ ***"Haveri District Bio-fuel Information and Demonstration Centre"*** **(ಲೆಕ್ಕ ಶೀರ್ಷಿಕೆ ಸಂ. 8220/310)** ರ ಅಡಿಯಲ್ಲಿ ತಾತ್ಕಾಲಿಕವಾಗಿ ಪ್ರೊಜೆಕ್ಟ್ ಅಸಿಸ್ಟಂಟ್ ಹುದ್ದೆಗೆ 179 ದಿನಗಳವರೆಗೆ **ಅಥವಾ ಯೋಜನೆಯ ಮುಕ್ತಾಯದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ** ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ ಮತ್ತು ವೇತನ ವಿವರಗಳು ಈ ಕೆಳಗಿನಂತಿವೆ.

Name of the Post	No. of Posts	Qualifications	Salary
Project Assistant	01	B.Sc. / BE	Rs. 16,718/- pm (Consolidated)

ನೇಮಕಾತಿ ಪಡೆಯಲು ಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ಅರ್ಜಿ ನಮೂನೆ (Proforma) ಯಲ್ಲಿ ಸ್ವವಿವರಗಳನ್ನು ಭರ್ತಿ ಮಾಡಿ, ದೃಢೀಕೃತ ಎರಡು ಪ್ರತಿಗಳೊಂದಿಗೆ **ದಿ: 23.11.2026 ರಂದು ಮುಂಜಾನೆ 11.00 ಗಂಟೆಗೆ ಡೀನ್(ಕೃಷಿ)ರವರ ಕಾರ್ಯಾಲಯ, ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯಲ್ಲಿ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ.**

ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ಈ ಕೆಳಕಾಣಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವುದು.

- ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಗೆ ಸಂಬಂಧಪಟ್ಟ ಮೂಲ ದಾಖಲೆಗಳೊಂದಿಗೆ ಹಾಗೂ ದೃಢೀಕೃತ ಎರಡು ಪ್ರತಿಗಳು ಮತ್ತು ಎರಡು ಭಾವಚಿತ್ರಗಳನ್ನು ಹಾಜರುಪಡಿಸುವುದು.
- ಯಾವುದೇ ಸಂದರ್ಭದಲ್ಲಿ ಅರ್ಜಿಯನ್ನು ಮುಂಗಡವಾಗಿ ಕಳುಹಿಸಬಾರದು ಮತ್ತು ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಹಾಜರಾಗಬೇಕು.
- ಸದರಿ ಸಂದರ್ಶನದಲ್ಲಿ **ಪ.ಜಾ / ಪ.ಪಂಗಡಕ್ಕೆ** ಸೇರಿದ ಅಭ್ಯರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯತೆ ನೀಡಲಾಗುವುದು.
- ಸದರಿ ನೇಮಕಾತಿಯು ತಾತ್ಕಾಲಿಕವಾಗಿರುವುದರಿಂದ ಯಾವುದೇ ಸಮಯದಲ್ಲಿ ಯಾವುದೇ ಕಾರಣ ತಿಳಿಸದೆ ತೆಗೆದು ಹಾಕಬಹುದು ಹಾಗೂ ಕೃಷಿವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿಗಾಗಿ ಯಾವುದೇ ತರಹದ ಹಕ್ಕಿಗೆ ಒಳಪಟ್ಟಿರುವುದಿಲ್ಲ.

ಡೀನ್ (ಕೃಷಿ) ಹಾಗೂ ಆವರಣದ ಮುಖ್ಯಸ್ಥರು

ಡೀನ್ (ಕೃಷಿ) ಹಾಗೂ ಆವರಣ ಮುಖ್ಯಸ್ಥರು
ಕೃಷಿ ಮಹಾವಿದ್ಯಾಲಯ
ಹನುಮನಮಟ್ಟಿ-581115

ಪ್ರತಿಗಳು:

1. ಶಿಕ್ಷಣ ನಿರ್ದೇಶಕರು/ ಕುಲಸಚಿವರು/ ಹಣಕಾಸು ನಿಯಂತ್ರಣಾಧಿಕಾರಿಗಳು/ ಆಡಳಿತಾಧಿಕಾರಿಗಳು/ಆಸ್ತಿ ಅಧಿಕಾರಿಗಳು ಕೃವಿವಿ, ಧಾರವಾಡ ಇವರ ಮಾಹಿತಿಗಾಗಿ
2. ಡೀನ್ (ಸ್ನಾತಕೋತ್ತರ)/ ಡೀನ್ (ಕೃಷಿ)/ಡೀನ್(ಸ.ವಿ.ಮ), ಕೃವಿವಿ, ಧಾರವಾಡ /ಡೀನ್ (ಕೃಷಿ) ವಿಜಯಪುರ/ ಡೀನ್ (ಅರಣ್ಯ), ಅರಣ್ಯ ಮಹಾವಿದ್ಯಾಲಯ, ಶಿರಸಿ / ಡೀನ್ (ವಿದ್ಯಾರ್ಥಿ ಕಲ್ಯಾಣ), ಕೃವಿವಿ, ಧಾರವಾಡ
3. ಸಂಶೋಧನಾ ನಿರ್ದೇಶಕರು/ವಿಸ್ತರಣಾ ನಿರ್ದೇಶಕರು, ಕೃವಿವಿ, ಧಾರವಾಡ
4. ಎಲ್ಲಾ ವಿಭಾಗಗಳ ಮುಖ್ಯಸ್ಥರು / ಎಲ್ಲಾ ಯೋಜನೆಗಳ ಮುಖ್ಯಸ್ಥರು, ಕೃವಿವಿ, ಧಾರವಾಡ/ ವಿಜಯಪುರ/ ಶಿರಸಿ
5. ಸಹ ವಿಸ್ತರಣಾ ನಿರ್ದೇಶಕರು (ಕೇ.ಸ್ಥಾ), ಕೃವಿವಿ, ಧಾರವಾಡ / ವಿಜಯಪುರ.
6. ಸಹ ಸಂಶೋಧನಾ ನಿರ್ದೇಶಕರು (ಕೇ.ಸ್ಥಾ), ಕೃವಿವಿ, ಧಾರವಾಡ / ವಿಜಯಪುರ.

7. ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃ.ವಿ.ಕೇಂ., ಹನುಮನಮಟ್ಟಿ/ಧಾರವಾಡ/ವಿಜಯಪುರ/ಬಾಗಲಕೋಟ/ಶಿರಸಿ/ಇಂಡಿ
8. ಮುಖ್ಯಸ್ಥರು / ಗ್ರಂಥಪಾಲಕರು, ರಾಣಿಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾಂವಿ/ ಗುಲ್ಬರ್ಗಾ ವಿಶ್ವವಿದ್ಯಾಲಯ, / ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ / ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ/ ಬೆಂಗಳೂರು ವಿಶ್ವವಿದ್ಯಾಲಯ / ಮೈಸೂರು ವಿಶ್ವವಿದ್ಯಾಲಯ / ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
9. **ಗ್ರಂಥಪಾಲಕರು, ಕೃವಿವಿ, ಧಾರವಾಡ – ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲು ಕೋರಲಾಗಿದೆ.**
10. **ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ಹಾವೇರಿ – ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಪ್ರಚಾರಪಡಿಸಲು ಕೋರಲಾಗಿದೆ.**

ಪ್ರ.ಆ.ಪೂ.: ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಗೌರವಾನ್ವಿತ ಕುಲಪತಿಗಳ ಗಮನಕ್ಕೆ ತರಲು ತಿಳಿಸಲಾಗಿದೆ.

ಪ್ರೊಜೆಕ್ಟ್ ಅಸಿಸ್ಟಂಟ್ ಹುದ್ದೆಗೆ ಅರ್ಜಿ

ಅನುಬಂಧ

ಭಾವಚಿತ್ರ

1. ಹುದ್ದೆಯ ಹೆಸರು :
2. ಅಭ್ಯರ್ಥಿಯ ಹೆಸರು :
3. ವಿಳಾಸ :
4. ಮೋಬೈಲ್ ಸಂಖ್ಯೆ :
5. ಜನ್ಮ ದಿನಾಂಕ :
6. ವಿದ್ಯಾರ್ಹತೆ :
7. ಜಾತಿಯ ವಿವರ :
8. ಅನುಭವ :
9. ಪ್ರಕಟಿತ ಲೇಖನಗಳು :

ಸ್ಥಳ :
ದಿನಾಂಕ :

ಅಭ್ಯರ್ಥಿಯ ಸಹಿ